ಧಾರವಾಡ ನಗರದ ವಿವಿಧ ಬಡಾವಣೆಗಳ ರಸ್ತೆ ಸ್ಥಿತಿಗತಿ ಕುರಿತು

331 - ಶ್ರೀ ಚಂದ್ರಕಾಂತ್ ಜಿ. ಬೆಲ್ಲದ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡದ ನಗರದ ವಿವಿಧ ಬಡಾವಣೆಗಳಲ್ಲಿ ರಸ್ತೆ ಮೇಟಲಿಂಗ್ ಆಗದೆ ಇರುವ ಹಾಗೂ ಮೇಟಲಿಂಗ್ ಆಗಿರುವ ರಸ್ತೆಗಳ ಸಂಖ್ಯೆ ಎಷ್ಟು., ಪ್ರತ್ಯೇಕ ಕೀಲೋಮೀಟರ್ ಮಾಹಿತಿ ನೀಡುವುದು?*

ಆ) *ಬಡಾವಣೆಗಳಲ್ಲಿ ಡಾಂಬರೀಕರಣ ಆಗಿರುವ ರಸ್ತೆಗಳ ವಿವರ ಮತ್ತು ಈಗ ಡಾಂಬರೀಕರಣ ಮಾಡಬೇಕಾಗಿರುವ ರಸ್ತೆಗಳನ್ನು ಮಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಇ) *ಈ ವರ್ಷದ ಯೋಜನೆಗಳಲ್ಲಿ ಯಾವ ಯಾವ ರಸ್ತೆಗಳ ಮೆಟಲಿಂಗ್ ಮತ್ತು ಡಾಂಬರೀಕರಣ ಕೆಲಸ ಪ್ರಾರಂಭಿಸಲಿವೆ? (ಪೂರ್ಣ ವಿವರ ನೀಡುವುದು)*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ , ಕಾಡಾ ಮತ್ತು ಹೈದ್ರಾಬಾದ್- ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಮೆಟ್ಲಿಂಗ್ ಆಗದೇ ಇರುವ ರಸ್ತೆಗಳು ಇರುವುದಿಲ್ಲ. ಮೆಟ್ಲಿಂಗ್ ಆಗಿರುವ ರಸ್ತೆಗಳ ಸಂಖ್ಯೆ ಒಟ್ಟು 64 ಇದ್ದು ಇದರ ಉದ್ದಳತೆ 35. 66 ಕಿ.ಮೀ. ಇರುತ್ತದೆ. ಪ್ರತ್ಯೇಕ ಕೀಲೋಮೀಟರ್ ಮಾಹಿತಿಯ ಯಾದಿಯನ್ನು ಅನುಬಂಧ -I ರಲ್ಲಿ ನೀಡಿದೆ.

ಆ) ಬಡಾವಣೆಗಳಲ್ಲಿ ಡಾಂಬರೀಕರಣ ಆಗಿರುವ ರಸ್ತೆಗಳ ವಿವರವನ್ನು ಅನುಬಂಧ -II ರಲ್ಲಿ ನೀಡಲಾಗಿದೆ.

ಮಹಾನಗರಸಭೆಯ ಹಣಕಾಸಿನ ಪರಿಸ್ಥಿತಿ ಗಮನದಲ್ಲಿಟ್ಟು ಕೊಂಡು ಹಂತ ಹಂತವಾಗಿ ಡಾಂಬರೀಕರಣ ಮಾಡಬೇಕಾಗಿರುವ ರಸ್ತೆಗಳ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ರಸ್ತೆಗಳ ಮೆಟ್ಲಿಂಗ್ ಮತ್ತು ಡಾಂಬರೀಕರಣ ಕೆಲಸ ಪ್ರಾರಂಭಿಸುವ ವಿವರಗಳು ಈ ಕೆಳಕಂಡಿಂತಿರುತ್ತವೆ.

	ಲೇ ಔಟಗಳ ಹೆಸರು	ಸರ್ವೆ ನಂ	ವಿಸ್ತೀರ್ಣ
1)	ಡಿ.ಸಿ. ಕುಮಾರ್ಸ್ ಲೇಔಟ್	11:ಎ:1ಸಿ	160
2)	ಸಪ್ತಪುರ ಲೇಔಟ್	58:59:ಎಸ್‌ಪಿ	379
3)	-ಅದೇ-	-ಅದೇ-	360
4)	-ಅದೇ-	-ಅದೇ -	340
5)	ವಿ.ಕೆ. ನಾಡಿಗರ್ ಲೇಔಟ್	1:ಎ:1:4:1:7	400
6)	ಕುಮಾರೇಶ್ವರ ಕೋ ಆಪರೇಟೀವ್ ಹೌಸಿಂಗ್ ಸೊಸೈಟಿ	14:ಜಿಎಲ್	1380

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 784 "ರ" ಕ್ಕೆ ಅನುಬಂಧ

ಕ್ರ.ಸಂ	ವಿನ್ಯಾಸಧ ಹೆಸರು	ಸರ್ವೆ ನಂ.	ಉದ್ದಳತೆ
1)	ಕೆರೋಲಿ ಕೋ ಕಾಲಿನಿ ಸಪ್ತಾಪುರ	ನಂ.37:2ಎ:65ಎಸ್ ಪಿ	1943.00 ಮೀಟರ್
2)	ಆರ್.ಆರ್. ದೇಶಪಾಂಡೆ ವಸತಿ ವಿನ್ಯಾಸ	6:44 ಎ:1ಎಸ್‌ಪಿ	600.00 ``
3)	ಎನ್.ಎಸ್. ಲಕ್ಷ್ಮೇಶ್ವರ ವಸತಿ ವಿನ್ಯಾಸ	90:ಭಾಗ: ಎಸ್ ಪಿ	550.00 "
4)	ವಿ.ಎ. ನಂದಿ ವಸತಿ ವಿನ್ಯಾಸ	53:2ಎ:ಎಸ್ ಪಿ	150.00 ``
5)	ಎಂ.ಮೋರೆ ವಸತಿ ವಿನ್ಯಾಸ	50:114ಎ:2: ಎಸ್ ಪಿ	255.00 "
6)	ಜಿ.ಆರ್. ಸತ್ತೂರ ವಸತಿ ವಿನ್ಯಾಸ	59:2ಜಿ	300.00 ``
7)	ಮಾಡೆಲ್ ಕೋ ವಸತಿ ವಿನ್ಯಾಸ	55-2ಎ.2ಟಿ	375.00 "
8)	ಎಲ್.ಬಿ.ಡಾರೂರ ವಸತಿ ವಿನ್ಯಾಸ	37ಎಲ್ ಕೆ	200.00 ``
9)	ಪಿ.ಬಿ. ಪಾಟೀಲ ವಸತಿ ವಿನ್ಯಾಸ	63 ಎಲ್ ಕೆ	515.00 "
10)	—ಸದರ—	83 ಎಲ್ ಕೆ	200.00 ``
11)	—ಸದರ—	65.1 ಎಲ್ ಕೆ	275.00 "
12)	ಎನ್. ಬಿ. ಪಾಟೀಲ್ ವಸತಿ ವಿನ್ಯಾಸ	44 ಎಲ್ ಕೆ	285.00 ``
13)	ಜನತಾ ಕೋ... ಹೌ. ಸೊಸೈಟಿ	88.2 ಎಲ್ ಕೆ	420.00 "
14)	ಎಸ್ . ಪತ್ರಾವಣಿ ವಸತಿ ವಿನ್ಯಾಸ ಹೋ. ನಾ. ಕೊಪ್ಪ	45.2 ಎನ್	200.00 ``
15)	ಡಾ। ಆರ್.ಎಸ್. ದೇಸಾಯಿ ವಸತಿ ವಿನ್ಯಾಸ	ಸಿ.ಜಿಎಸ್.200ಎ	135.00 "
16)	ಎಸ್.ಸಾಕಾರ ವಸತಿ ವಿನ್ಯಾಸ ಸಪ್ತಾಪುರ	71ಎ:63 ಎಸ್ ಪಿ	1072.00 ``
17)	ಕೆ.ಜಿ. ಬೋರ್ಡ ನೌಕರರ ಸಂಘ ವಿನ್ಯಾಸ	1.3 ಎಸ್ ಪಿ	931.00"
18)	ವಿಶ್ವಭಾರತಿ ವಸತಿ ವಿನ್ಯಾಸ	26.2 ಎಸ್ ಪಿ	480.00 ``
19)	ಕಾಲಭಾವಿ ವಸತಿ ವಿನ್ಯಾಸ	68.2. ಎಸ್ ಪಿ	575.0 "

20)	ಸು.ಧಾ.ಮ. ನಗರಾಭಿವೃದ್ಧಿ ಪ್ರಾಧಿಕಾರ	58.59 ಎಸ್ ಪಿ	1079.00 ``
21)	ತುಂಗಭದ್ರಾ ಗೃಹ ನಿರ್ಮಾಣ ಸಂಘ	101:2ಸಿ:101.5	406.00 "
22)	—ಸದರ—	101:6 101.7 ಎಸ್ ಪಿ	375.00 ``
23)	ಎಂಪ್ಲಾಯಡ್ ಬಿಲ್ಡರ್ಸ್ ವಸತಿ ವಿನ್ಯಾಸ	34ಎ:1 ಎಲ್ ಕೆ	600.00 "
24)	ಶ್ರೀ ಮಂಜೂನಾಥೇಶ್ವರ ಕೋ. ಗೃ.ನಿ.ಸಂಘ	9:1ಎ:.1 ಜಿ.ಎಂಕೆ	800.00 ``
25)	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಡಾ. ಸೋ.	61 ಎ ಡಬ್ಲೂಕೆ	675.00 "
26)	ಹೊಯ್ಸಳ ನಗರ ಗೃ.ನಿ.ಸಣ್ಣ ಸೋಮಾಪುರ	510 ಸಿಕೆ 28	2050.00 ಮೀಟರ್
27)	ಶಾಂತಿನಗರ ಹೌ.ಸೊ. ಮಿಶನ್ ಕಾಂಪೌಂಡ್	ಸಿಜಿಎಸ್: 39.2ಎ	275.00 ``
28)	ಎ.ಎಂ. ಬೆಟಗೇರಿ ಜಿಪಿಎಚ್ (ಬಿ.ವಿ.ಕುಲಕರ್ಣಿ)	58.1	475.00 "
29)	ಹನುಮಂತನಗರ ಗೃ.ನಿ.ಸಂಘ	81ಎ:2ಎ ಜಿಎಚ್2ಜಿ:ಎ2	1200.00 ``
30)	ಪತ್ರಾವಳಿ ಲೇಔಟ್	45:1ಎ: 46:1ಎ	400.00"
31)	ಎಂ.ಕೆ.ಮಕಾನಪುರ	43 ಎ: ಎಲ್‌ಕೆ	275.00 ``
32)	ಚಿದಂಬರ ಗೃ.ನಿ.ಸಂಘ	55:ಎಲಕೆ	480.00 "
33)	ನವೋದಯ ವಸತಿ ವಿನ್ಯಾಸ	91(ಭಾಗ•92 ಎಸ್ ಪಿ)	1410.00 ``
34)	—ಸದರ—	15(ಭಾಗ) 17ಭಾಗ ಎಸ್ ಪಿ	210.00 "
35)	ಎಂ.ಕೆ. ಕಡ್ಡಿ ವಸತಿ ವಿನ್ಯಾಸ	7 ಬ:ಎಲ್ ಕೆ:	480.00 ``
36)	ಎಂ.ಕೆ.ಕುಲಕರ್ಣಿ ವಸತಿ ವಿನ್ಯಾಸ	61ಎ:ಎಸ್‌ಪಿ	76.00 "
37)	ಎನ್.ಎಸ್.ಕಾಮತ್ ವಸತಿ ವಿನ್ಯಾಸ	58:1:1ಎ ಎಲಕ	275.00 ``
38)	ತುಂಗಭದ್ರಾ ಗೃ.ನಿ.ಸಂಘ	99(ಭಾಗ)ಬ್ಲಾಕ್	406.00 "
39)	—ಸದರ—	401 :2ಎ ಎಸ್ ಪಿ	280.00 ``
40)	ಎಸ್.ಬಿ.ಕೋಯಿಮುತ್ತೂರ ವಸತಿ ವಿನ್ಯಾಸ ನಾರಾಯಣಪುರ	ಸಿಟಿಎಸ್ 7.1 ಎನ್‌ಎಲ್	375.00 "
41)	ಪಿ.ಸಿ. ಕುಂಕುರಿ ವಸತಿ ವಿನ್ಯಾಸ	93: 2.100:ಎಸ್ ಪಿ	760.00 ``
42)	ಸವಣೂರು ಬ್ರದರ್ಸ್ ಪಿ.ಆರ್. ಕುಲಕರ್ಣಿ ವಸತಿ ವಿನ್ಯಾಸ	50ಎ.2:4 4 ಜಿ 1ಎಸ್ ಪಿ	180.00 "

43)	ರಾಜ್ಯ ಸರ್ಕಾರಿ ನೌಕರರ ವಸತಿ ವಿನ್ಯಾಸ ಕೆಲಗೇರಿ	ಜಿ.101 ಜಿ ವ 195 ಎ	1256.00 ಮೀಟರ್
44)	ವಿ.ಆರ್.ಸಾಲಿಮಠ ವಸತಿ ವಿನ್ಯಾಸ	ಜಿ 1.512 ಎಲ್.ಬಿ	600.00 "
45)	ಚಿನ್ನ ಬಸವೇಶ್ವರ ಗೃ.ನಿ.ಸಂಘ	27.2	525.00 ``
46)	ಜಿ.ವಿ. ಬಿಜಾಪುರ ವಸತಿ ವಿನ್ಯಾಸ ಸಪ್ತಾಪುರ	112 ಎಸ್ ಪಿ	436.00 "
47)	ಎಸ್.ಎಸ್. ಲಕ್ಷ್ಮೇಶ್ವರ ವಸತಿ ವಿನ್ಯಾಸ	90.2ಬಿ.ಎಸ್.ಪಿ	76.00 ``
48)	ಹುಡ್ಕೋ ಕಾಲನಿ ವಸತಿ ವಿನ್ಯಾಸ ಹೋ ನಾ. ಕೊಪ್ಪ	44.2ಎ+ 2 ಬಿ ವ 51.2	280.00 "
49)	ಡಿ.ಪಿ.ಕರಮರ ವಿನ್ಯಾಸ	16 ಸಿ.ಎನ್.ಎಲ್.	160.00 ``
50)	ವಿ.ವಿ. ದೊನವಾಡ ವಸತಿ ವಿನ್ಯಾಸ	6 ಬಿ 2 ಬಿ.ಎಸ್.ಪಿ	280.00 "
51)	ವಿನಾಯಕ ಕೋ. ಹೌ.ಸೊಸೈಟಿ	34.ಎಸ್ ಪಿ	1072.00 ಮೀಟರ್
52)	ಗಾಣೇಕರ ವಸತಿ ವಿನ್ಯಾಸ	32: ಎ ಎಸ್	340.00 ``
53)	ವಿ.ಕೆ. ನಾಡಗೇರ ವಸತಿ ವಿನ್ಯಾಸ	2ಎ:1:4:1:7	400.00 "
54)	ಎಸ್.ವಿ.ಜೋಶಿ ವಸತಿ ವಿನ್ಯಾಸ	-	480.00 ``
55)	ಬಿ.ಆರ್.ಮೋರೆ ವಸತಿ ವಿನ್ಯಾಸ	12:1ಎ ಜಿಎಲ್	200.00 "
56)	ಎನ್.ಸಿ.ಶಿವಳ್ಳಿ ವಸತಿ ವಿನ್ಯಾಸ	10: 3	396.00 ``
57)	ಎಂ.ಯು.ಪಾಟೀಲ್ ವಸತಿ ವಿನ್ಯಾಸ	10:2	625.00 "
58)	ಕುಮಾರೇಶ್ವರ ಗೃ.ನಿರ್ಮಾಣ ಸಹಕಾರ ಸಂಘ	14 ಜಿಎಲ್	1380.00 ``
59)	ದಿ-ವಿಕಾಸ ಕೋ. ಹೌ. ಸೊಸೈಟಿ	52ಎ:1ಅ:1ಬ ಮತ್ತು52ಜಿ :1:4 ಕೆ	1352.00 "
60)	ರಾಜ್ಯ ಸರ್ಕಾರಿ ನೌಕರರ ಹೌ.ಸೊ.ಹೆಬ್ಬಳ್ಳಿ ಅಗಸಿ	52:2	480.00 ಠ
61)	—ಸದರ—	42:1	265.00 ``
62)	ಶ್ರೀ ಕೆ.ವಿ. ನಾಯಕ್ ವ.ವಿನ್ಯಾಸ	967:868	300.00 "
63)	ಸ್ಟೇಟ್ ಬ್ಯಾಂಕ್ ಆಫ್ ವಸತಿ ವಿನ್ಯಾಸ	4061•	775.00 ``
64)	ಡಾ। ಎಸ್.ಎ. ಎಲೇಡಳ್ಳಿ	2. ಎ	365.00 "

ಚುಕ್ಕೆ ಗುರುತಿನ ಇಲ್ಲದ ಪ್ರಶ್ನೆ :78 "ಅ" ಕ್ಕೆ ಅನುಬಂಧ - 11

ಕ್ರ.ನಂ	ವಿನ್ಯಾಸ ಹೆಸರು	ಸರ್ವೆ ನಂ.	ಉದ್ದಳತೆ
1)	ನವೋದಯ ಕೋ. ಹೌ.ಸೊಸೈಟಿ	84:ಐ:ಎಸ್ ಪಿ	688.00 ಮೀಟರ್
2)	ಎಸ್.ಸಿ ಪಾಟೀಲ್ ಹೌ.ಸೊಸೈಟಿ	68:1:ಎಸ್ ಪಿ	600.00 ``
3)	ಆರ್.ಎನ್. ದೇಶಪಾಂಡೆ ಹೌ.ಸೊಸೈಟಿ	14 ಎಸ್ ಪಿ	400.00 "
4)	ನವೋದಯ ಹೌ. ಸೊಸೈಟಿ	43:60 ವ 61.1 ಎಸ್ ಪಿ	2260.00 ``
5)	ಸಿ.ಎನ್. ಕುರಿಡಕೇರಿ	37.2ಎ.2ಎಸ್ ಪಿ	2000.00 "
6)	ಶ್ರೀಮತಿ ಎನ್.ಎನ್. ಗೌಡರ್ ಕೋ.ಹೌ.ಸೊಸೈಟಿ	35.ಎ.ಎಸ್ ಪಿ	90.00 ``
7)	ಅಗಸನಹಳ್ಳಿ ವಸತಿ ವಿನ್ಯಾಸ	50.2 ಎಸಪಿ	276.00 "
8)	ಶ್ರೀಮತಿ ಎ.ಸಿ. ಎಲಿಗಾರ ವಸತಿ ವಿನ್ಯಾಸ	87.1+ 2 ಎ ಎಸ್ ಪಿ	530.00 ``
9)	ನವೋದಯ ಕೋ. ಹೌ.ಸೊಸೈಟಿ	23,61 ವ 61	275.00 "
10)	ಡಿ.ವಿ.ಅಡೂರ ವಸತಿ ವಿನ್ಯಾಸ	60 : ಎ:ಎಸ್‌ಪಿ	1190.00 ``
11)	ಎಚ್.ಬಟವಿ ವಸತಿ ವಿನ್ಯಾಸ	53.3 ಎಸ್‌ಪಿ 55.56	965.00 "
12)	ಶ್ರೀಮತಿ ಎಸ್.ವಿ. ಮುರಗಲ್ಲಿ ವಸತಿ ವಿನ್ಯಾಸ	64.ಎ 1.2 ಎ.ಎಸ್ ಪಿ	82.00 ``
13)	ಸಿ.ಜಿ.ಎಲಿಗಾರ್ ವಸತಿ ವಿನ್ಯಾಸ	37.1 ಎಸ್‌ಪಿ	205.00 "
14)	ಬಿ.ಆರ್.ಸತೂರ್ ವಸತಿ ವಿನ್ಯಾಸ	59.2 ಎಲ್‌ಕೆ	275.00 ``
15)	ಪಿ.ಜಾ.ಪಾಟೀಲ್ ವಸತಿ ವಿನ್ಯಾಸ	61 ಎಲ್‌ಕೆ	288.00 "
16)	ವಿವೇಕಾನಂದ ಹೌ ಸೊಸೈಟಿ	187. ಎಲ್‌ಕೆ	280.00 ``
17)	ಪಿ.ವಿ. ದೇಶಪಾಂಡೆ ವಸತಿ ವಿನ್ಯಾಸ ನಾರಾಯಣಪುರ	1+1 ಸಿ/1+ 4 + 146/2	1000.00 "
18)	ಆರ್.ಆರ್. ದೇಶಪಾಂಡೆ ವಸತಿ ವಿನ್ಯಾಸ	14 ಎಸ್‌ಪಿ	400.00 ``
19)	ತೇಜಸ್ವಿನಗರ ಕೋ.ಹೌ.ಸೊಸೈಟಿ	65.1:65.2	680.00 "
20)	ಆರ್.ಎಂ.ಪಾಟೀಲ್ ವಸತಿ ವಿನ್ಯಾಸ	65.2 ಜಿ 65.2ಸಿ	580.00 ``

ಅ.ಸಂ	ವಿನ್ಯಾಸದ ಹೆಸರು	ಸರ್ವೆ ನಂ.	ಉದ್ದಳತೆ
21)	ಸು.ಧಾ.ನಗರಾಭಿವೃದ್ದಿ ಪ್ರಾಧಿಕಾರ	115.1 ಎಸ್‌ಪಿ	875.00 ಮೀಟರ್
22)	ಸಿಲ್ವರ್ ಆರ್ಚರ್ಡ ವಸತಿ ವಿನ್ಯಾಸ	43.ಎ: 1.45.1	620.00 ``
23)	ಎ.ಆರ್. ಹುಬ್ಬಳ್ಳಿ ವಸತಿ ವಿನ್ಯಾಸ	52.ಬಿ: ಡಿಡಿ	340.00 "
24)	ಎಸ್.ಎಸ್.ಉಣಕಲ್ ವಸತಿ ವಿನ್ಯಾಸ	21.22	600.00 "

ಚುಕ್ಕೆ ಗುರುತಿನಲ್ಲದ ಪ್ರಶ್ನೆ ಸಂಖ್ಯೆ :784 "ಇ" ಕ್ಕೆ ಅನುಬಂಧ-3

1)	ಡಿ.ಸಿ. ಕರಮಕರ ವಸತಿ ವಿನ್ಯಾಸ	11ಎ: 1ಬಿ	160.00 ಮೀಟರ್
2)	ಸಪ್ತಾಪುರ ವಸತಿ ವಿನ್ಯಾಸ	58: 59	379.00 "
3)	ಸಪ್ತಾಪುರ ವಸತಿ ವಿನ್ಯಾಸ	58 :59	360.00 ``
4)	ಸಪ್ತಾಪುರ ವಸತಿ ವಿನ್ಯಾಸ	58 :68	340.00 "
5)	ವಿ.ಕೆ. ನಾಡಗೇರ ವಸತಿ ವಿನ್ಯಾಸ	1ಎ :1: 4: 1:7	400.00 ``
6)	ಕುಮಾರೇಶ್ವರ ಗೃ.ನಿ.ಅ.ಸ.ಸಂಘ	14 ಜಿಎಲ್	1380.00 "

ಶ್ರೀ ಚಂದ್ರಕಾಂತ್ ಜಿ ಬೆಲ್ಲದ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ. ಏನೆಂದರೆ, ಬೆಂಗಳೂರು ನಂತರ, ಹುಬ್ಬಳ್ಳಿ-ಧಾರವಾಡದ 2ನೇ ಮಹಾನಗರ. ಆ ಮಹಾನಗರದಲ್ಲಿ ರಸ್ತೆಗಳ ದುಸ್ಥಿತಿಯಂತೂ ಹೇಳಲಿಕ್ಕೆ ಬಾರದು. ಈ ದುಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತೇನೆ. ಎಲ್ಲಾ ಕಳಪೆ ಗುಣಮಟ್ಟದಲ್ಲಿ ರಸ್ತೆಗಳನ್ನು ಮಾಡಿದ್ದಾರೆ. ಮೆಟಲಿಂಗ್ ಸರಿ ಇಲ್ಲ. ಡಾಂಬರೀಕರಣ ಸರಿಯಾಗಿಲ್ಲ. ಈ ರಸ್ತೆಗಳ ಬಗ್ಗೆ ಅವರು ಏನು ಕ್ರಮ ತೆಗೆದುಕೊಳ್ಳುತ್ತಾರೆಂಬುದಾಗಿ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ವೈಜನಾಥ ಪಾಟೀಲ್ : ಹುಬ್ಬಳ್ಳಿ-ಧಾರವಾಡ ಮಹಾನಗರಗಳಲ್ಲಿ, ಅದರಲ್ಲೂ ಹುಬ್ಬಳ್ಳಿಯಲ್ಲಿ ಬಹಳ ರಸ್ತೆಗಳು ಕೆಟ್ಟಿವೆ ಎಂದು ಕೆಲವು ಶಾಸಕರು ಹೇಳಿದ್ದಾರೆ. ಬಹಳಷ್ಟು ಹಣ ಧಾರವಾಡದಲ್ಲಿ ಖರ್ಚಾಗಿದೆ.. ರಸ್ತೆಗಳೆಲ್ಲಾ ಸರಿಯಾಗಿದೆ ಎಂದು ಕೇಳಿದ್ದೇನೆ. ಈಗ ಅದರೊಳಗೆ ಕಳಪೆ ದರ್ಜೆ ಕೆಲಸ ಏನು ನಡೆದಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ, ನಾನು ಅದರ ಬಗ್ಗೆ ವಿಚಾರಣೆ ಮಾಡಿಸುತ್ತೇನೆ. ಮಾಡಿ ಕೆಲವು ಕಡೆ ಬಡಾವಣೆಗಳು ಅಂದರೆ ಹೊಸ ಬಡಾವಣೆಗಳಲ್ಲಿರುವ ರೋಡುಗಳಿಗೆ ಏನು ಡಾಂಭರೀಕರಣ ಆಗಿಲ್ಲ, ಅಂತಹ ಕಡೆ ಡಾಂಭರೀಕರಣ ಮಾಡುವ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈ ವರ್ಷ 6 ರಸ್ತೆಗಳು ಸುಮಾರು 3.2 ಕಿ. ಮೀ. ರಸ್ತೆ ಡಾಂಭರೀಕರಣ ಮಾಡುವ ವ್ಯವಸ್ಥೆ ಕೂಡ ಈ ವರ್ಷ ಉಂಟು.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ಕಳಪೆ ಮಟ್ಟದ ಏನು ಕಾರ್ಯಆಗಿದೆ, ಇದರ ಬಗ್ಗೆ ಏನು ತೀವ್ರ ಕ್ರಮ ತೆಗೆದುಕೊಳ್ಳುತ್ತೀರಿ? ಏಕೆಂದರೆ, ಮಹಾನಗರಸಭೆಯ ಆಡಳಿತ ಪೂರ್ಣ ಶಿಥಿಲಗೊಂಡಿದೆ, ಶೋಚನೀಯವಾದ ಸ್ಥಿತಿಯಲ್ಲಿದೆ. ಆಡಳಿತವೇ ಅಲ್ಲಿ ಹದಗೆಟ್ಟಿದೆ. ಈ ಒಂದು ಸ್ಥಿತಿಗೆ ಕಾರಣವಾದಂತಹ ಈ ಮಹಾನಗರಸಭೆಯ ಆಡಳಿತಕ್ಕೆ ತಾವು ತೀವ್ರವಾಗಿ ಏನು ಗಮನ ಕೊಡುತ್ತೀರಿ? ಈ ರಸ್ತೆಗಳನ್ನು ಮಾಡಿ ದುಡ್ಡು ತೆಗೆದುಕೊಂಡಿದ್ದಾರೆ, ಇವೆಲ್ಲಾ ಸರಿಯಾಗಿ ಆಗಿಲ್ಲ ಅನ್ನುವುದರ ಬಗ್ಗೆ ತಾವು ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅದನ್ನು ತನಿಖೆ ಮಾಡುತ್ತೀರೋ ಹೇಗೆ ಎನ್ನುವುದರ ಕಡೆಗೆ ಗಮನ ಕೊಡಬೇಕು. ಇನ್ನೊಂದು 2 ನೇ ಪ್ರಶ್ನೆ ನಿಮಗೆ ಕೇಳುತ್ತಿದ್ದೇನೆ, 15-20 ವರ್ಷಗಳಿಂದ ಅನೇಕ ಬಡಾವಣೆಗಳಲ್ಲಿರುವ ರಸ್ತೆಗಳು ಇನ್ನೂ ಡಾಂಭರೀಕರಣ ಆಗಿಲ್ಲ. ಅಂತಹ ರಸ್ತೆಗಳಿಗೆ ಏನಾದರೂ ಡಾಂಭರೀಕರಣ ಮಾಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಿದೆಯೇ? ಈ ಎರಡೂ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡಬೇಕೆಂದು ಸನ್ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ವೈಜನಾಥ ಪಾಟೀಲ್ : ಪ್ರತಿ ವರ್ಷ ಕೆಲವು ರಸ್ತೆಗಳಿಗೆ ಡಾಂಭರೀಕಣ ಆಗುತ್ತದೆ. ಈ ವರ್ಷ ಕೂಡ ಕೆಲವು ರೋಡುಗಳಿಗೆ, ಅಂದರೆ 6 ರಸ್ತೆಗಳಿಗೆ ಧಾರವಾಡದಲ್ಲಿ ಡಾಂಬರೀಕರಣ ಮಾಡುವ ವ್ಯವಸ್ಥೆ ಇದೆ. ಈಗ ಕಳಪೆ ದರ್ಜೆ ಕಾಮಗಾರಿಗಳ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನಿರ್ದಿಷ್ಟವಾಗಿ ಯಾವ ರಸ್ತೆ ಯಾವ ತರಹದ್ದು ವಿಚಾರಣೆ ತಾವು ಮಾಡಬೇಕೆಂದು ಅನ್ನುತ್ತೀರಿ, ಆ ತರಹದ ವಿಚಾರಣೆಯನ್ನು ಮಾಡುವುದಕ್ಕೆ ತಯಾರಿದ್ದೇವೆ, ತಾವು ನಿರ್ದಿಷ್ಟವಾಗಿ ಹೇಳಿ. ಒಟ್ಟಾರೆ ಹೇಳಿದರೆ ಹೇಗೆ? ಇಂತಹ ರಸ್ತೆಯಲ್ಲಿ ಇಂತಹ ಕೆಲಸ ಆಗಿಲ್ಲ ಎಂದು ಹೇಳಿದರೆ ಅದರ ಬಗ್ಗೆ ವಿಚಾರಣೆ ಮಾಡುತ್ತೇನೆ.

ಪ್ರಶ್ನೋತ್ತರ ವೇಳೆ ಮುಗಿಯಿತು.